<u>ದಿನಾಂಕ: **28-11-2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಮುಂದುವರೆದ ಮುಖ್ಯ ವಿಚಾರಣೆ ಃ ಡಿಕ್ರಿದಾರರ ಪರ ಶ್ರೀ ಬಿ ಸಿ ವಿ ಎಸ್ ವಕೀಲರಿಂದ:</u>

ಪಿ.ಎಫ್ ಪಾವತಿ ಮಾಡದೇ ಇದ್ದ ಸಂದರ್ಭದಲ್ಲಿ ಕಲಂ:3(ಎ), 6 ಮತ್ತು 12(ಎ) Employees provident fund and miscellaneous provision Act ಪ್ರಕಾರ ನೋಟೀಸು ಕೊಡಬೇಕು ಎಂದರೆ ಸರಿ. ಯಾವುದೇ ಒಂದು ಎಸ್ಟಾಬ್ಲಿಷ್ಮೆಂಟೆ ತೆರೆಯಬೇಕಾದರೆ 7 ಜನ ರಿಂದ 20 ಜನಕ್ಕಿಂತ ಕಡಿಮೆ ಇದ್ದಾಗ ಮಷಿನರಿ ಅಗತ್ಯ ಇರುತ್ತದೆ ಎಂದರೆ ಸರಿಯಲ್ಲ. ಕಲಂ:3(ಎ), 6 ಮತ್ತು 12(ಎ) ನೋಟೀಸನ್ನು 3 ತಿಂಗಳಿಗೊಮ್ಮೆ ಎಸ್ಟಾಬ್ಲಿಷ್ಮೆಂಟೆ ಮಾಲೀಕರಿಗೆ ಕೊಡಬೇಕು ಎಂದರೆ ಸರಿಯಲ್ಲ. ಎಸ್ಟಾಬ್ಲಿಷ್ಮೆಂಟೆ ಮಾಲೀಕರಿಗೆ ತೀರುವಳಿ ಸಂಬಂಧ ಕಲಂ:8 (ಜಿ) ಅಡಿ ನೋಟೀಸು ಕೊಡಬೇಕು. ನಾವು ಕಲಂ: 8(ಜಿ) ಅಡಿ ನೋಟೀಸು ಕೊಟ್ಟ ಸಂಬಂಧ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿ ಕಲಂ: 8(ಜಿ) ಅಡಿ ನೋಟೀಸು ಕೊಟ್ಟ ಬಗ್ಗೆ ದಾಖಲೆ ಇರುವುದಿಲ್ಲ. ಕಲಂ: 8(ಜಿ) ಅಡಿ ನೋಟೀಸು ಕೊಟ್ಟ ಬಗ್ಗೆ ದಾಖಲೆಯನ್ನು ನ್ಯಾಯಲಾಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ.

2. ನಿಆರ್-2 ರ ಪ್ರಕಾರ ಮೇ 2020 ರಿಂದ ಜುಲೈ 2021 ರವರೆಗೆ ಪಿ ಎಫ್ ಬಾಕಿ ಇರುವ ಬಗ್ಗೆ ಆದೇಶದ ಪ್ರತಿ ಇರುತ್ತದೆ ಎಂದರೆ ಸರಿ. ಮೇ 2020 ರಿಂದ ಜುಲೈ 2021 ರವರೆಗೆ ಪಿ.ಎಫ್ ಬಾಕಿ ಎಷ್ಟು ಹಣ ಇರುತ್ತದೆ ಎಂದು ನಿಆರ್- 2 ರಲ್ಲಿ ನಮೂದು ಇರುತ್ತದೆಯೇ ಎಂದರೆ ಸಾಕ್ಷಿ ನಾನು ನಿಆರ್- 2 ನ್ನು ತಪ್ಪಾಗಿ ಓದಿಕೊಂಡಿರುತ್ತೇನೆ ಆದರೆ ಮೇ 2020 ರ ವೇತನ ಬಾಕಿ ಇರುತ್ತದೆ ಉತ್ತರಿಸುತ್ತಾರೆ. ನಿಆರ್- 2 ರಲ್ಲಿ ಮೇ 2020 ರಿಂದ ಜುಲೈ 2022 ರವರೆಗೆ ಹಣ ಬಾಕಿ ಇರುವ ಬಗ್ಗೆ ನಮೂದು ಮಾಡಿರುತ್ತಾರೆ ಎಂದರೆ ಸರಿ.

3. ಯಾವುದೇ ಪಿ.ಎಫ್ ನಮುಾದು ಮಾಡಬೇಕಾದರೆ ಬೆನಿಫೀಶಿಯರಿ ಹೆಸರನ್ನು ನಮೂದು ಮಾಡಬೇಕಾಗುತ್ತದೆ ಎಂದರೆ ಸರಿ. ನಾನು ಹಾಜರುಪಡಿಸಿರುವ ದಾಖಲೆಯಲ್ಲಿ ಬೆನಿಫೀಶಿಯರಿ ಇವರ ಹೆಸರನ್ನು ನಮೂದು ಮಾಡಿರುವ ದಾಖಲೆಯನ್ನು

ಹಾಜರುಪಡಿಸಿರುವುದಿಲ್ಲ. ಕಲಂಃ 7 ಎ ಮತ್ತು 14 provident fund and miscellaneous provision Act ಕಾಯ್ದೆ ಅಡಿ ಕ್ರಿಮಿನಲ್ ಪ್ರಕರಣ ದಾಖಲು ಮಾಡಿದ ಬಗ್ಗೆ ದಾಖಲೆಯನ್ನು ನ್ಯಾಯಲಯಕ್ಕೆ ತಂದು ಹಾಜರುಪಡಿಸುತ್ತೇನೆ. ಯಾವ ನ್ಯಾಯಾಲಯದಲ್ಲಿ ಕ್ರಿಮಿನಲ್ ಪ್ರಕರಣ ದಾಖಲು ಮಾಡಿರುತ್ತೇವೆ ಎಂದು ನನಗೆ ಗೊತ್ತಿರುವುದಿಲ್ಲ. ಕಲಂಃ 7 ಎ ಮತ್ತು 14 provident fund and miscellaneous provision Act ಪ್ರಕಾರ ಕ್ರಿಮಿನಲ್ ಪ್ರಕರಣ ದಾಖಲಿಸಬೇಕಾದರೆ ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಚಿಕ್ಕಮಗಳೂರಿನಲ್ಲಿ ಪ್ರಕರಣ ದಾಖಲಿಸಬೇಕು ಎಂದರೆ ಸರಿ.

4. ನಿಆರ್- 4 ರಲ್ಲಿ ಯಾವ ನ್ಯಾಯಾಲಯದಲ್ಲಿ ಪ್ರಕರಣ ದಾಖಲು ಮಾಡಿದ ಬಗ್ಗೆ ಮತ್ತು ಯಾವ ಕಲಂಃ ನ ಅಡಿಯಲ್ಲಿ ದಾಖಲು ಮಾಡಿದ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಕಲಂಃ 7 ಎ ಅಡಿ ಹಣ ಕಟ್ಟಿದ ನಂತರ ಕಲಂಃ 7 ಕ್ಯೂ ಅಡಿ ಬಡ್ಡಿ ಕೇಳುತ್ತೇವೆ ಎಂದರೆ ಸರಿ. ನಿಆರ್- 2 ರಲ್ಲಿ ಯಾವಾಗ ಉದ್ದಿಮೆಯನ್ನು ಮುಚ್ಚಲಾಗಿರುತ್ತದೆ ಎಂದು ನಮೂದು ಇರುವುದಿಲ್ಲ. ನಿಆರ್- 2 ರ ಪ್ರಕಾರ ಏಪ್ರಿಲ್ 2020 ರ ನಂತರ ಬಾಕಿ ಇರುವ ಬಗ್ಗೆ ದಾಖಲೆ ಸಿಗದ ಕಾರಣ ಆದೇಶ ಮಾಡಿರುವುದಿಲ್ಲ ಎಂದು ನಮೂದು ಮಾಡಿರುತ್ತಾರೆ. ಯಾವುದೇ ಒಂದು ಉದ್ದಿಮೆ ಮುಚ್ಚಿದಾಗ Employees provident fund ಅನ್ನು ವಾಪಸ್ಸು ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಕಲಂಃ 7 ಎ ಕೆಳಗೆ ಯಾವಾಗ ಹಣ ಪಾವತಿ ಮಾಡಿರುತ್ತಾರೆ ಎಂದು ನಿಆರ್ 4 ರಲ್ಲಿ ನಮೂದು ಇರುವುದಿಲ್ಲ. ದಿನಾಂಕ 28.03.2024 ರಲ್ಲಿ ಕಲಂಃ 7 ಕ್ಯೂ ನೋಟೀಸನ್ನು ಕೊಟ್ಟಿರುತ್ತೇವೆ. ದಿನಾಂಕ 28.03.2024 ರಂದು 7 ಕ್ಯೂ ನೋಟೀಸನ್ನು ಕೊಡುವ ಪೂರ್ವದಲ್ಲಿ ಕಲಂಃ 7 ಎ ಅಡಿ ಯಾವುದೇ ಬೇ ಬಾಕಿ ಇರುವುದಿಲ್ಲ ಎಂದರೆ ಸರಿಯಲ್ಲ.

5. ದಿನಾಂಕ 05.03.2024 ರಂದು ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ತಹಶೀಲ್ದಾರರ ಮುಖಾಂತರ ಟಿ ಸಿ ಎಸ್ ಕಂಪನಿಗೆ ಕೊನೆ ವಿಳಾಸಕ್ಕೆ ನೋಟೀಸನ್ನು ಕೊಟ್ಟಿರುತ್ತೇವೆ. ಸದರಿ ನೋಟೀಸು ಕೊಟ್ಟ ಬಗ್ಗೆ ಮತ್ತು ಜಾರಿ ಆದ ಬಗ್ಗೆ ನಾನು ಯಾವುದೇ ದಾಖಲೆಯನ್ನು ಹಾಜರುಪಸಿಡಿರುವುದಿಲ್ಲ. ಆ ರೀತಿ ನೋಟೀಸು ಕೊಟ್ಟ ಬಗ್ಗೆ

ಮತ್ತು ಜಾರಿ ಆದ ಸಂಬಂಧ ದಾಖಲೆಯನ್ನು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ನಿಆರ್-2 ಆದೇಶ ಆದ ನಂತರ ನಾವು ಎಸ್ಟಾಬ್ಲಿಷ್ಮೆಂಟೆಗೆ ಕಲಂಃ 7 ಎ ಕೆಳಗೆ ನೋಟೀಸು ಕೊಟ್ಟಿರುವ ಬಗ್ಗೆ ನಾನು ದಾಖಲೆಯನ್ನು ನೋಡಿ ಹೇಳಬೇಕಾಗುತ್ತದೆ. ಕಲಂ 8 ಬಿ ಇಂದ ಜಿ ವರೆಗೆ ನಾವು ಮರು ಪಾವತಿ ಕೋರಿ ಕ್ರಮ ಕೈಗೊಂಡ ಬಗ್ಗೆ ದಾಖಲೆ ಇರುತ್ತದೆ ಆದರೆ ಅದನ್ನು ಹಾಜರುಪಡಿಸಿರುವುದಿಲ್ಲ. ನಾವು ಕಲಂಃ 8 ಬಿ ಇಂದ ಜಿ ವರೆಗೆ ಎಸ್ಟಾಬ್ಲಿಷ್ಮೆಂಟೆ ವಿರುದ್ಧ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಎಂದರೆ ಸರಿಯಲ್ಲ.

6. ಕಲಂಃ 12 ಎ ಕೆಳಗೆ ಯಾವ ಕಾರಣಕ್ಕಾಗಿ ನೋಟೀಸು ಕೊಡುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಯಾವುದೇ ಒಂದು ಎಸ್ಟಾಬ್ಲಿಷ್ಮೆಂಟೆ ಮುಚ್ಚಿ ದ ನಂತರ Employees provident fund ಮಾಡಲು ಬರುವುದಿಲ್ಲ ಎಂದರೆ ಸಾಕ್ಷಿ ಅದು ಮುಚ್ಚಿದೆ ಎಂದು ಅಧಿಕೃತವಾದರೆ ಮಾತ್ರ provident fund ತೆಗೆದುಕೊಳ್ಳಲು ಬರುವುದಿಲ್ಲ ಎಂದು ಉತ್ತರಿಸುತ್ತಾರೆ. ನಿಆರ್ 2 ರ ಪ್ರಕಾರ ಟಿ ಸಿ ಎಸ್ ಉದ್ದಿಮೆ ಶೆಟ್ ಡೌನ್ ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಆರ್-2 ರ ಪ್ರಕಾರ ಮೇ 2020 ರನಂತರ ಟಿ ಸಿ ಎಸ್ ಉದ್ದಿಮೆ ಅಸ್ಸೆಸ್ಮೆಂಟನ್ನು ನಾನು ಮಾಡಿರುವುದಿಲ್ಲ. ನಿಆರ್-2 ರ ಪ್ರಕಾರ ಏಪ್ರಿಲ್ 2020 ರ ವರೆಗೆ ವೇತನವನ್ನು ಪಾವತಿ ಮಾಡಿದ ಬಗ್ಗೆ ಮತ್ತು ಪಿಂಚಣಿಯನ್ನ ಕಡಿತಗೊಳಿಸಿದ ಬಗ್ಗೆ ನಮೂದಿಸಿರುತ್ತೇವೆ ಎಂದರೆ ಸರಿ.

7. ಟಿ ಸಿ ಎಸ್ ಉದ್ದಿಮೆ ಮುಚ್ಚುವ ಕಾಲಕ್ಕೆ ಎಷ್ಟು ಜನ ಕಾರ್ಮಿಕರು ಇದ್ದರು ಮತ್ತು ಅವರ ಬೆನಿಫೀಶಿಯರಿ ಯಾರು ಇದ್ದರು ಎಂಬುದರ ಬಗ್ಗೆ ದಾಖಲೆಯನ್ನು ನ್ಯಾಯಲಾಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. Employees provident fund and miscellaneous provision Act ಪ್ರಕಾರ ವರ್ಷಕ್ಕೆ ಎಷ್ಟು ಬಾರಿ ನಾವು ಉದ್ದಿಮೆ ಸ್ಥಳಕ್ಕೆ ಭೇಟಿ ನೀಡಬೇಕು ಎಂಬ ಪ್ರಶ್ನೆಗೆ ಸಾಕ್ಷಿ 2001 ರ ಪೂರ್ವದಲ್ಲೇ ಇತ್ತು ಆದರೆ ಈಗ ಇರುವುದಿಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿ ಮುಂದುವರೆದು ಉದ್ದಿಮೆಯವರು ಡೀಫಾಲ್ಟ್ ಆದರೆ ಮಾತ್ರ ಹೋಗಬೇಕಾಗುತ್ತದೆ ಎಂದು ಉತ್ತರಿಸುತ್ತಾರೆ. ಟಿ ಸಿ ಎಸ್ ಉದ್ದಿಮೆಯವರು ಡೀಫಾಲ್ಟ್ ಆಗಿರುತ್ತಾರೆ ಎಂದರೆ ಸರಿ.

8. ಟಿ ಸಿ ಎಸ್ ಉದ್ದಿಮೆಯವರು ಅಕ್ಟೋಬರ್ 2018 ರಿಂದ ಜುಲೈ 2020 ರವರೆಗೆ ಡೀಫಾಲ್ಟ್‌ರ್ ಇದ್ದರು. ಜುಲೈ 2020 ರಿಂದ ಜುಲೈ 2021 ರವರೆಗೆ ನಾವು ಟಿ ಸಿ ಎಸ್ ಉದ್ದಿಮೆಗೆ ಎಷ್ಟು ಬಾರಿ ಹೋಗಿರುತ್ತೇವೆ ಎಂದು ನನಗೆ ಹೇಳಲು ಬರುವುದಿಲ್ಲ. 2021 ರಿಂದ ಇಲ್ಲಿಯವರೆಗೆ ನಾವು ಎಷ್ಟು ಬಾರಿ ಸದರಿ ಟಿ ಸಿ ಎಸ್ ಉದ್ದಿಮೆಗೆ ಭೇಟಿ ಕೊಟ್ಟಿರುತ್ತೇವೆ ಎಂದರೆ ಸಾಕ್ಷಿ ನಾವು ಹೋಗಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನಾವು ಕಲಂಃ 7 ಎ ನೋಟೀಸು ಕೊಟ್ಟ ನಂತರ ಟಿ ಸಿ ಎಸ್ ಉದ್ದಿಮೆಯವರು ಎಲ್ಲಾ ಹಣವನ್ನು ಪಾವತಿ ಮಾಡಿದ್ದು ಯಾವುದೇ ಬೇ ಬಾಕಿ ಇರುವುದಿಲ್ಲ ಎಂದರೆ ಸರಿಯಲ್ಲ.

9. ಕಲಂಃ 14 ಬಿ ನೋಟೀಸನ್ನು ದಂಡ/ಜುಲ್ಮಾನೆ ರೂಪದಲ್ಲಿ ನೀಡುತ್ತಾರೆ. ಕಲಂಃ 7 ಎ ಅಡಿ ಹಣ ಪಾವತಿ ಮಾಡಲು ತಪ್ಪಿದಲ್ಲಿ ಕಲಂಃ 14 ಬಿ ನೋಟೀಸು ನೀಡುತ್ತಾರೆ ಎಂದರೆ ಸರಿ. ಕಲಂಃ7 ಎ ಅಡಿ ಯಾವುದೇ ಉದ್ದಿಮೆಯ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸುವ ಪೂರ್ವದಲ್ಲಿ ಈ ಕಾಯ್ದೆ ಅನ್ವಯ ಆಗುವ ಬಗ್ಗೆ ತಿಳಿದುಕೊಂಡು ಪ್ರಕರಣ ದಾಖಲಿಸುತ್ತಾರೆ ಎಂದರೆ ಸರಿಯಲ್ಲ. ಕಲಂಃ 7 ಎ(5) ರ ಪ್ರಕಾರ ಉದ್ದಿಮೆಯ ಬಗ್ಗೆ ಮೊದಲು ಕಾಯ್ದೆ ಅನ್ವಯ ಆಗುತ್ತದೆಯೋ ಇಲ್ಲವೋ ಎಂಬುದರ ಬಗ್ಗೆ ಪರಿಶೀಲಿಸಬೇಕಾಗುತ್ತದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಈ ಪ್ರಕರಣಕ್ಕೆ ಅದು ಅನ್ವಯ ಅಗುವುದಿಲ್ಲ ಎಂದು ಉತ್ತರಿಸುತ್ತಾರೆ. ಕಲಂಃ7 ಎ(5) ಪ್ರಕಾರ ಸದರಿ ಉದ್ದಿಮೆಯಲ್ಲಿ ಎಷ್ಟು ಜನ ಕೆಲಸ ಮಾಡುತ್ತಾರೆ ಮತ್ತು ಬಿಟ್ಟು ಹೋಗಿರುತ್ತಾರೆ ಎಂಬ ಬಗ್ಗೆ ಲೆಡ್ಜರ್ ಅನ್ನು ಪರಿಶೀಲನೆ ಮಾಡಬೇಕಾಗುತ್ತದೆ ಎಂದರೆ ಸರಿ.

10. ಟಿ ಸಿ ಎಸ್ ಉದ್ದಿಮೆಯಲ್ಲಿ ಎಷ್ಟು ಜನ ಕೆಲಸ ಮಾಡುತ್ತಿದ್ದರು ಎಂಬುದರ ಬಗ್ಗೆ ದಾಖಲೆಯನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ ಎಂದರೆ ಸಾಕ್ಷಿ ಆ ರೀತಿ ಲೆಡ್ಜರ್ ಇಟ್ಟಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಟಿ ಸಿ ಎಸ್ ಉದ್ದಿಮೆಯಲ್ಲಿ ಎಷ್ಟು ಜನ ಕೆಲಸ ಮಾಡುತ್ತಾರೆ ಮತ್ತು ಬೆನಿಫೀಶಿಯರಿ ಯಾರು ಕೆಲಸ ಮಾಡುತ್ತಾರೆ ಎಂಬುದರ ಬಗ್ಗೆ ಲೆಡ್ಜರ್ ಇಲ್ಲದೇ ಇರುವ ಕಾರಣ ಯಾವ ಆಧಾರದ ಮೇಲೆ ಪಿ ಎಫ್ ತೆಗೆದುಕೊಳ್ಳುತ್ತಿದ್ದೀರಿ ಎಂದರೆ ಸಾಕ್ಷಿ ಅವರ ಹಾಜರಾತಿ ಮತ್ತು ಸ್ಯಾಲರಿ ಮೇಲೆ ಹೇಳುತ್ತಿದ್ದೇನೆ ಎಂದು ಉತ್ತರಿಸುತ್ತಾರೆ. ನಿಆರ್-1 ರಲ್ಲಿ ಯಾವ ದಾಖಲೆಯ ಆಧಾರದ ಮೇಲೆ ಅವರ ಪಿ ಎಫ್ ಬಾಕಿ ಇರುತ್ತದೆ ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಾವು ಸದರಿ

ಉದ್ದಿಮೆಯ ಮೇಲೆ ನೋಟೀಸು ನೀಡದೇ ಯಾವುದೇ ಕಾನೂನು ಕ್ರಮ ಕೈಗೊಳ್ಳಲು ಬರುವುದಿಲ್ಲ ಎಂದರೇ ಸರಿ. ನಾನು ಯಾವ ದಿನಾಂಕದಂದು ಟಿ ಸಿ ಎಸ್ ಉದ್ದಿ ಮೆಯ ನಾನು ಬರೆದ ಹಾಜರಿ ಪುಸ್ತಕ ಪಡೆದುಕೊಂಡಿರುತ್ತೇನೆ ಎಂದು ನನಗೆ ಹೇಳಲು ಆಗುವುದಿಲ್ಲ. ಹಾಜರಿ ಪುಸ್ತಕವನ್ನು ಹಾಜರುಪಡಿಸುವಂತೆ ನಾನು ನೋಟೀಸನ್ನು ಕೊಟ್ಟಿರುತ್ತೇನೆ ಆದರೆ ನೆನಪಿರುವುದಿಲ್ಲ. ನೋಟೀಸು ಕೊಟ್ಟ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಕಲಂಃ 7(ಎ)(1) ರ ಅಡಿ ತನಿಖೆ ಮಾಡುವ ಪೂರ್ವದಲ್ಲಿ ನೋಟೀಸು ಕೊಟ್ಟಿರುತ್ತೇನೆ. ಆ ರೀತಿ ನೋಟೀಸು ಕೊಟ್ಟ ಬಗ್ಗೆ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ನಾವು ಕಲಂಃ 7 ಎ ಅಡಿ ಪ್ರಕರಣ ದಾಖಲಿಸುವ ಪೂರ್ವದಲ್ಲಿ ಕಲಂಃ 7 ಎ(3)(ಎ) ರ ಅಡಿ ನೋಟೀಸು ಕೊಡಬೇಕು ಎಂದರೆ ಸರಿ. ನಿಆರ್ 1 ಮತ್ತು 2 ರ ಆದೇಶದ ಪೂರ್ವದಲ್ಲಿ ನೋಟೀಸು ಕೊಟ್ಟಿದ್ದು ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಏಪ್ರಿಲ್ 2020 ರ ಟಿ ಸಿ ಎಸ್ ಉದ್ದಿಮೆಯ ಔಟ್‌ಸ್ಟಾಂಡಿಂಗ್ ಎಷ್ಟು ಇತ್ತು ಎಂದರೆ ಸಾಕ್ಷಿ 25 ಲಕ್ಷ ಇತ್ತು ಅದರಲ್ಲಿ 19 ಲಕ್ಷ ತೀರುವಳಿ ಮಾಡಿಕೊಂಡಿರುತ್ತೇವೆ ಎಂದು ಉತ್ತರಿಸುತ್ತಾರೆ. ನಾವು ಈಗ ಕ್ಲೈಮ್ ಮಾಡುತ್ತಿರುವ ಮೊತ್ತ ಏಪ್ರೀಲ್ 2020 ರ ವರೆಗೆ ಮಾತ್ರ ಎಂದರೆ ಸರಿ. ದಿನಾಂಕ 28.03.2024 ರಲ್ಲಿ ಏಪ್ರೀಲ್ 2020 ರಲ್ಲಿ ರೂ.6,13,524/- ಔಟ್‌ಸ್ಟಾಂಡಿಂಗ್ ಇತ್ತು ಎಂದು ಹೇಳಿರುತ್ತೇನೆ ಎಂದರೆ ಸರಿ. ನಾವು ಔಟ್‌ಸ್ಟಾಂಡಿಂಗ್ ಮೊತ್ತ ರೂ.6,13,524/- ಕಟ್ಟುವಂತೆ ನೋಟೀಸು ಕೊಟ್ಟಿದ್ದು ಸದರಿ ದಾಖಲೆ ನಮ್ಮ ಬಳಿ ಇದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ.

11. ಸಿ ಡಿ ಸಿ ಸಿ ಬ್ಯಾಂಕ್ ನವರು ಟಿ ಸಿ ಎಸ್ ಸಂಸ್ಥೆಯ ವಿರುದ್ಧ ಹಣ ವಸೂಲಾತಿಗೆ ಹೋಗಿರುವ ವಿಚಾರ ಯಾವಾಗ ಗೊತ್ತಾಯಿತು ಎಂಬ ಪ್ರಶ್ನೆಗೆ ಸಾಕ್ಷಿ ಯಾವಾಗ ಎಂದು ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಏಪ್ರೀಲ್ 2020 ರ ನಂತರ ಟಿ ಸಿ ಎಸ್ ಉದ್ದಿಮೆಯ ನಂತರದ ಹಾಜರಾತಿ ಪುಸ್ತಕ ಮತ್ತು ವೇತನ ಪುಸ್ತಕ ಪಡೆದುಕೊಂಡಿರುವ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ಯಾವುದೇ ಸಂಸ್ಥೆಯ ನೌಕರರ ಹಾಜರಾತಿ ಪುಸ್ತಕ ಮತ್ತು ವೇತನ ಪುಸ್ತಕ ಪಡೆಯಬೇಕಾದರೆ ಕಲಂಃ 7 ಎ(3)ಎ ಅಡಿ ನೋಟೀಸು

ನೀಡಬೇಕು ಎಂದರೆ ಸರಿ. ನಮೂನೆ 3 ಎ 6 ಎ ಮತ್ತು 12 ಎ ರಡಿಯಲ್ಲಿ ನಾವು ಪೂರ್ವ ನಿಗಧಿತ ಪ್ರತಿ ಮೂರು ತಿಂಗಳ ನೋಟೀಸು ನೀಡದೇ ಅವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಲು ಬರುವುದಿಲ್ಲ ಎಂದರೆ ಸರಿ.

12. ರೆವೆನ್ಯೂ ರೆಕವರಿ ಸರ್ಟಿಫಿಕೇಟ್ ಅನ್ನು ವರ್ಷದ ಏಪ್ರಿಲ್ ತಿಂಗಳಲ್ಲಿ ನೀಡುತ್ತೇವೆ. ಸದರಿ ನೋಟೀಸನ್ನು ನಾವು ನೋಂದಾಯಿತ ಅಂಚೆಯ ಮೂಲಕ ಕಳುಹಿಸುತ್ತೇವೆ. 2018-19 ರಲ್ಲಿ ರೆವೆನ್ಯೂ ರೆಕವರಿ ಸರ್ಟಿಫಿಕೇಟ್ ನೀಡದ ಸಂಬಂಧ ಪೋಸ್ಟಲ್ ಅಕ್ನಾಲೆಡ್ಜ್‌ಮೆಂಟ್ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. 2018-19 ರಲ್ಲಿ ನಾವು ಯಾವುದೇ ಆದೇಶವನ್ನು ಮಾಡಿರುವುದಿಲ್ಲ ಎಂದರೆ ಸರಿ. ಏಪ್ರಿಲ್ 2020 ರ ನಂತರ ನಾವು ಯಾವುದೇ ಆದೇಶವನ್ನು ಮಾಡಿರುವುದಿಲ್ಲ ಎಂದರೆ ಸರಿ. ಏಪ್ರಿಲ್ 2020 ರಲ್ಲಿ ಮಾಡಿದ ಆರ್ ಆರ್ ಸಿ ಯಲ್ಲಿ ದಿನಾಂಕ 11.03.2021 ರ ಆದೇಶ ನಮೂದು ಮಾಡಲು ಬರುವುದಿಲ್ಲ ಎಂದರೆ ಸರಿ. ದಿನಾಂಕ 11.03.2021 ರ ಆದೇಶದ ನಂತರ ಟಿ ಸಿ ಎಸ್ ಸಂಸ್ಥೆಗೆ ಏಪ್ರಿಲ್ 2021 ರಲ್ಲಿ ಹಣ ಬಾಕಿ ಇರುವ ಬಗ್ಗೆ ಮಾಹಿತಿ ನೀಡಿರುತ್ತೇವೆ. ಆ ರೀತಿ ನೋಟೀಸು ಕಳುಹಿಸುವ ಕಾಲಕ್ಕೆ ಟಿ ಸಿ ಎಸ್ ಸಂಸ್ಥೆ ಚಾಲ್ತಿಯಲ್ಲಿತ್ತ ಎಂಬ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಯಾವುದೇ ಸಂಸ್ಥೆ ಡಿಫಾಲ್ಟ್ ಆದರೆ ನಾವು ಖುದ್ದಾಗಿ ಸ್ಥಳ ಪರಿಶೀಲನೆ ಮಾಡಬೇಕಾಗುತ್ತದೆ ಎಂದರೆ ಸರಿ.

13. ನಾವು ಕೇಳಿರುವ ಇ ಪಿ ಎಫ್ ಮೊತ್ತವನ್ನು ಟಿ ಸಿ ಎಸ್ ಉದ್ದಿಮೆಯಿಂದ ಪಡೆಯಲು ಬರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 30.06.2023 ರಲ್ಲಿ ಟಿ ಸಿ ಎಸ್ ಸಂಸ್ಥೆ ರೂ.66,69,772/- ಬಾಕಿ ಇರುವ ಬಗ್ಗೆ ದಾಖಲೆ ಇರುವುದಿಲ್ಲ ಆದರೆ ಸ್ಟೇಟ್‌ಮೆಂಟ್ ಇರುತ್ತದೆ ಎಂದು ಉತ್ತರಿಸುತ್ತಾರೆ. ಸದರಿ ರೂ. 66,69,772/- ಎಷ್ಟು ಜನಕ್ಕೆ ಬರಬೇಕು ಎಂಬುದರ ಬಗ್ಗೆ ಲೆಡ್ಜರ್ ಅಕೌಂಟ್ ಅನ್ನು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ಏಪ್ರಿಲ್ 2020 ರಿಂದ ದಿನಾಂಕ 30.06.2023 ರವರೆಗೆ ಯಾವ ಯಾವ ನೌಕರರಿಗೆ ಎಷ್ಟು ಪಿ ಎಫ್ ಹಣ ಮತ್ತು ಆಡಳಿತಾತ್ಮಕ ಖರ್ಚು ಬರಬೇಕು ಎಂಬುದರ ಬಗ್ಗೆ ನಮ್ಮ ಕಛೇರಿಯಲ್ಲಿ ದಾಖಲೆ ಇರುತ್ತದೆ ಅದನ್ನು ನ್ಯಾಯಾಲಯಕ್ಕೆ

ಹಾಜರುಪಡಿಸಲು ತೊಂದರೆ ಇರುವುದಿಲ್ಲ. ನಾವು Employees provident fund and miscellaneous provision Act ನ ಅಡಿ ಕಡ್ಡಾಯ ನೋಟೀಸನ್ನು ನೀಡದ ಕಾರಣ ಸದರಿ ಟಿ ಸಿ ಎಸ್ ಸಂಸ್ಥೆಯ ನೌಕರರಿಗೆ ಯಾವುದೇ ಕ್ರಮ ಕೈಗೊಳ್ಳಲು ಬರುವುದಿಲ್ಲ.

14. ತಹಶೀಲ್ದಾರ್ ರವರಿಗೆ ಯಾವಾಗ ಕಲಂ॥ 8 ಜಿ ಕೆಳಗೆ ನೋಟೀಸು ಕೊಟ್ಟಿರುತ್ತೇವೆ ಎಂದು ನಾನು ದಾಖಲೆ ನೋಡಿ ಹೇಳಬೇಕು. ಮಧ್ಯಂತರ ಆದೇಶ ಆಗುವ ಪೂರ್ವದಲ್ಲಿ ತಹಶೀಲ್ದಾರ್ ರವರಿಗೆ ನೋಟೀಸು ಕೊಟ್ಟಿದ್ದೀರ ಅಥಾವ ನಂತರ ಕೊಟ್ಟಿದ್ದೀರ ಎಂದರೆ ಸಾಕ್ಷಿ ಅದರ ಬಗ್ಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. 66 ಲಕ್ಷ ಹಣವನ್ನು ನಾವು ಕಲಂ॥ 7 ಕ್ಯೂ ನೋಟೀಸು ನೀಡುವ ಕಾಲಕ್ಕೆ ಗೊತ್ತಿತ್ತು ಎಂದರೆ ಸರಿ. ನಿಆರ್-4 ರಲ್ಲಿ ನಮೂದಿಸಿದ 23 ಲಕ್ಷ 7 ಎ ನೋಟೀಸ್ ಗೆ ಸಂಬಂಧಿಸಿದ ಮೊತ್ತ ಇರುತ್ತದೆ. ಕಲಂ॥7 ಕ್ಯೂ ನೋಟೀಸು ನೀಡುವ ಕಾಲಕ್ಕೆ 14 ಬಿ ಮೊತ್ತ ಎಷ್ಟು ಇತ್ತು ಎಂದು ನನಗೆ ಗೊತ್ತಿರುವುದಿಲ್ಲ. ಕಲಂ॥ 14 ಬಿ ಅನ್ನು ಎಷ್ಟು ಮೊತ್ತ ಬಾಕಿ ಇತ್ತು ಎಂಬುದರ ಬಗ್ಗೆ ದಾಖಲೆಯನ್ನು ಹಾಜರುಪಡಿಸುತ್ತೇನೆ. ಯಾವುದೇ ಒಂದು ಉದ್ದಿಮೆ ಡೀಫಾಲ್ಟ್ ಆದರೆ ಸದರಿಯವರ ಖಾತೆ Extract ನಲ್ಲಿ ನಮೂದು ಇರುವುದಿಲ್ಲ ಎಂದರೆ ಸರಿ. 2018 ರ ನಂತರ ನಾವು ಟಿ ಸಿ ಎಸ್ ಉದ್ದಿಮೆಗೆ ಭೇಟಿ ನೀಡಿರುವುದಿಲ್ಲ ಎಂದರೆ ಸರಿ. ಕಲಂ॥ 7 ಎ ಅಡಿ ನೋಟೀಸು ನೀಡಿದ ನಂತರ ನಾವು ಕಲಂ॥ 7 ಕ್ಯೂ ಮತ್ತು 14 ಬಿ ಅಡಿ ಲೆಕ್ಕ ಹಾಕುತ್ತೇವೆ ಎಂದರೆ ಸರಿ. ನಿಆರ್ -1 ಅನ್ನು ಅಕ್ಟೋಬರ್ 2018 ರಿಂದ ಆಗಸ್ಟ್ 2019 ರವರೆಗೆ ನಾವು ಲೆಕ್ಕ ಮಾಡಿರುತ್ತೇವೆ. ಆ ರೀತಿ ಲೆಕ್ಕ ಮಾಡುವ ಕಾಲಕ್ಕೆ ನಾವು ಉದ್ದಿಮೆಗೆ ನೋಟೀಸು ನೀಡಿ ನಡಾವಳಿ ಬರಯುತ್ತೆವೆ ಎಂದರೆ ಸರಿ. ಅಕ್ಟೋಬರ್ 2018 ರಿಂದ ಆಗಸ್ಟ್ 2019 ರವರೆಗೆ ನಮ್ಮ ಕಛೇರಿಯ ನಡಾವಳಿ ದಾಖಲೆಯನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಸದರಿ ನಡಾವಳಿಯಲ್ಲಿ ಟಿ ಸಿ ಎಸ್ ಸಂಸ್ಥೆಯ ಆಡಳಿತಾ ಮಂಡಳಿಯವರಿಗೆ ಮತ್ತು ಸದಸ್ಯರಿಗೆ ನೋಟೀಸು ನೀಡಿದ ಬಗ್ಗೆ ಬರೆದಿರುತ್ತೇವೆ ಎಂದರೆ ಸರಿ. ಆ ಕಾಲಕ್ಕೆ ಸದರಿ ಸಂಸ್ದೆಯಲ್ಲಿ ಯಾರು ಇದ್ದರು ಅದರ ಬಗ್ಗೆ ನಮೂದು ಮಾಡುತ್ತೇವೆ ಎಂದರೆ ಸರಿ.

15. ನಿಆರ್ 1 ರಲ್ಲಿ ಅಕ್ಟೋಬರ್ 2018 ರಿಂದ ಆಗಸ್ಟ್ 2019 ರವರೆಗೆ ರಮಿಟ್ಟೆನ್ಸ್ ಬಾಕಿ ಇರುತ್ತದೆ ಎಂದು ಹೇಳಿರುತ್ತೇನೆ. ಟಿ.ಸಿ.ಎಸ್ ಸಂಸ್ಥೆಯವರು ಯಾವ

ವರ್ಷ ರೆಮಿಟ್ಟೆನ್ಸ್ ಮಾಡಿರುವುದಿಲ್ಲ ಎಂದು ದೂರು ನೀಡಿದ್ದು ಅದನ್ನು ಅಕ್ಟೋಬರ್ 2018 ರಿಂದ ಆಗಸ್ಟ್ 2019 ರ ಅವಧಿಗೆ ಮಾಡಿರಬಹುದು. ಕಲಂ 409 ಭಾ.ದಂ.ಸಂ ಅಪರಾಧವನ್ನು ಯಾವ ಠಾಣೆಯಲ್ಲಿ ದೂರುನ್ನು ದಾಖಲಿಸಿರುತ್ತೇನೆ ಎಂದು ನನಗೆ ಹೇಳಲು ಬರುವುದಿಲ್ಲ. ಟಿ ಸಿ ಎಸ್ ಸಂಸ್ಥೆಯ ವಿರುದ್ಧ ಕಲಂಃ 7(ಎ) ಹಾಗೂ 14 ರಲ್ಲಿ ಯಾವುದೇ ಪ್ರಕರಣ ಬಾಕಿ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಕಲಂಃ 11 applicable ಆಗಬೇಕಾದರೆ ಕಲಂಃ 7(ಎ) ಮತ್ತು 14 ನಾವು ಕಾಂಪ್ಲೆ ಮಾಡಿರಬೇಕು ಎಂದರೆ ಸರಿ. ಕಲಂಃ 8(ಜಿ) applicable ಆಗಬೇಕಾದರೆ ಕಲಂಃ 7(ಎ) ಮತ್ತು 14 ನಾವು ಕಾಂಪ್ಲೆ ಮಾಡಿರಬೇಕು ಎಂದರೆ ಸರಿ. ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿ ಟಿ.ಸಿ.ಎಸ್ ಸಂಸ್ಥೆಯವರು ಎಷ್ಟು ಮೊತ್ತ ರೆಮಿಟ್ಟೆನ್ಸ್ ಮಾಡುವುದು ಬಾಕಿ ಇದೆ ಎಂದು ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ಅಕ್ಟೋಬರ್ 2018 ರಿಂದ ಏಪ್ರಿಲ್ 2020 ರವರೆಗೆ ಸುಮಾರು ರೂ.66,69,721/- ಟಿ.ಸಿ.ಎಸ್ ಸಂಸ್ಥೆಯವರು ರೆಮಿಟ್ಟೆನ್ಸ್ ಮಾಡುವುದು ಬಾಕಿ ಇರುತ್ತದೆ. ಈ ರೀತಿ ಬಾಕಿ ಇರುವ ಬಗ್ಗೆ 7 (ಎ) ರಲ್ಲಿ ನಮೂದು ಇರುತ್ತದೆ.

16. 7(ಎ) ನೋಟೀಸು ಕೊಡುವ ಪೂರ್ವದಲ್ಲಿ ಕೊನೆಯದಾಗಿ ಯಾವಾಗ ಟಿ.ಸಿ.ಎಸ್ ಸಂಸ್ಥೆಗೆ ಭೇಟಿ ನೀಡಿದ್ದೇನೆ ಎಂದರೆ ನೆನಪಿರುವುದಿಲ್ಲ. 8(ಜಿ) ಕೊಡುವ ಪೂರ್ವದಲ್ಲಿ ಅಥವಾ ನಂತರದಲ್ಲಿ ಸದರಿ ಸಂಸ್ಥೆಗೆ ಭೇಟಿ ನೀಡಿದ ಬಗ್ಗೆ ನನಗೆ ನೆನಪಿರುವುದಿಲ್ಲ. ನಾವು ಕಲಂಃ 7(ಎ) ಮತ್ತು 14 ನ್ನು ಕಂಪ್ಲೇ ಮಾಡದ ಕಾರಣ ಕಲಂ 11 ರಡಿ ನಾವು ಪ್ರಥಮಾ ಆಧ್ಯತೆ ನೀಡುವಂತೆ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನಾವು ಈ ಕಾಯ್ದೆಯ applicability ಅನ್ನು ತೀರ್ಮಾನ ಮಾಡಿಕೊಳ್ಳದೇ ಯಾರ ವಿರುದ್ಧ ಹಾಗೂ ಸಂಸ್ಥೆಯ ವಿರುದ್ಧ ಸಹ ಪ್ರಾಸಿಕ್ಯೂಶನ್ ಗೆ ಒಳಪಡಿಸಲು ಬರುವುದಿಲ್ಲ ಎಂದರೆ ಸರಿ. ಯಾವುದೇ ಸಂಸ್ಥೆ ಮುಚ್ಚಿದ ನಂತರ ಆ ಸಂಸ್ಥೆಯ ವಿರುದ್ಧ ನಾವು ಹಣ ಪಾವತಿಸುವಂತೆ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಒಂದು ಸಂಸ್ಥೆ ಮುಚ್ಚಿದ್ದ ನಂತರ ಸದರಿ ಸಂಸ್ಥೆಯ ಪ್ರಾವಿಡೆಂಟ್ ಫಂಡನ್ನು ರೆಮಿಟ್ಟೆನ್ಸ್ ಮಾಡುವಂತೆ ಕೇಳಲು ಬರುವುದಿಲ್ಲ ಎಂದರೆ ಸರಿ ಸಾಕ್ಷಿ ಮುಂದುವರೆದು 7(ಕ್ಯೂ) ಇಂಟೆರಸ್ಟ್ ಅನ್ನು ಕೇಳಬಹುದು ಎಂದು ಉತ್ತರಿಸುತ್ತಾರೆ.

7(ಕ್ಯೂ) ಇಂಟರೆಸ್ಟ್ ಅನ್ನು ಸಂಸ್ಥೆ ಮುಚ್ಚಿದ ನಂತರ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ.

17. ನಿಆರ್-2 ರ ನಂತರ ಜಾರಿ ಅಧಿಕಾರಿಗಳು ಯಾವುದೇ ಆದೇಶ ಇರುವುದಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. 2021 ರ ನಂತರ ನಮ್ಮ ಸಂಸ್ಥೆಯವರು 7(ಎ) ಕೇಳಗೆ ಯಾವುದೇ ಆದೇಶ ಮಾಡಿರುವುದಿಲ್ಲ ಎಂದರೆ ಸರಿ. ನಿಆರ್ 2 ರಲ್ಲಿ ನಮ್ಮ ಹಿಂದಿನ ಜಾರಿ ನಿರ್ದೇಶನ ಅಧಿಕಾರಿಗಳು ಟಿ.ಸಿ.ಎಸ್ ಸಂಸ್ಥೆ ಮುಚ್ಚಿರುವ ಬಗ್ಗೆ ನಮೂದು ಮಾಡಿರುತ್ತಾರೆ ಎಂದರೆ ಸರಿ. ನಿಆರ್ 2 ರಲ್ಲಿ ಈಗಾಗಲೇ ಸಂಸ್ಥೆ ಮುಚ್ಚಿದೆ ಎಂದು ಹೇಳಿದ ಮೇಲೆ ನಾವು ಕಲಂ 7(ಎ) ಮತ್ತು 14 ರಲ್ಲಿ ಪ್ರಾವಿಡೆಂಟ್ ಫಂಡನ್ನು ಕೇಳಲು ಬರುವುದಿಲ್ಲ ಎಂದರೆ ಸರಿ ಸಾಕ್ಷಿ ಕಲಂ 14 ರಲ್ಲಿ ಕೇಳಲು ಬರಬಹುದು ಎಂದು ಉತ್ತರಿಸುತ್ತಾರೆ. ಕಲಂಃ 14 ರಲ್ಲಿ ತಡವಾಗಿ ಪೇಮೆಂಟ್ ಮಾಡಿದರೆ ಡ್ಯಾಮೇಜಸ್ ಕೇಳಬಹುದು ಎಂದು ಇರುತ್ತದೆ ಎಂದರೆ ಸರಿ. ನಾನು ಹಾಜರುಪಡಿಸಿರುವ ದಾಖಲೆಗಳ ಪ್ರಕಾರ ರೂ.32,39,833/- ಡ್ಯಾಮೇಜ್ ಮೊತ್ತವನ್ನು ಅಕ್ಟೋಬರ್ 2018 ರಿಂದ ಏಪ್ರೀಲ್ 2020 ರ ಅವಧಿಗೆ ಕೇಳಿರುತ್ತೇವೆ. ಏಪ್ರೀಲ್ 2020 ರವರೆಗೆ ಕಲಂ 7(ಎ) ಕೆಳಗೆ ರೂ.16,27,343/- ಬಾಕಿ ಇತ್ತು. ಸೆಪ್ಟೆಂಬರ್ 2019 ರಿಂದ ಏಪ್ರೀಲ್ 2020 ರವರಗೆ ಕಾಂಟ್ರಿಬ್ಯೂಷನ್ ಬಾಕಿ ಇದ್ದಾಗ ನಾವು ಆ ವರ್ಷದ ರೆಮಿಟೆನ್ಸ್ ಅನ್ನು ಪಾವತಿ ಮಾಡುವಂತೆ ನೋಟೀಸು ಕೊಡುತ್ತೇವೆ ಎಂದರೆ ಸಾಕ್ಷಿ ಆ ರೀತಿ ಇರುವುದಿಲ್ಲ ಎಂದು ಉತ್ತರಿಸುತ್ತಾರೆ.

18. ಮೇ 2020 ರಿಂದ ಜುಲೈ 2021 ರವರೆಗೆ ಟಿ ಸಿ ಎಸ್ ಸಂಸ್ಥೆಯವರು ಕೇವಲ ರೂ.500/- ಕಾಂಟ್ರಿಬ್ಯೂಷನ್ ಮಾತ್ರ ಕಟ್ಟಬೇಕೆಂದು ಬೇರೆ ಯಾವುದೇ ಬಾಕಿ ಇರುವುದಿಲ್ಲ ಎಂದರೆ ಸರಿ. ನಾನು ಡಿಕ್ರಿದಾರರು ಕ್ಲೈಮ್ ಮೊತ್ತವನ್ನು ಪಡೆಯಬಾರದು ಎಂಬ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಟಿ.ಸಿ.ಎಸ್ ಸಂಸ್ಥೆಯಿಂದ ಎಂಪ್ಲಾಯಿ ಕಾಂಟ್ರಿಬ್ಯೂಷನ್ ಗೆ ಎಷ್ಟು ಮೊತ್ತ ಬರಬೇಕು ಎನ್ನುವ ಬಗ್ಗೆದಾಖಲೆಯನ್ನು ಹಾಜರುಪಡಿಸದೇ ನಮಗೆ ಪ್ರಥಮ ಆದ್ಯತೆ ನೀಡಬೇಕು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಲಂಃ7(ಎ) ಮತ್ತು 14 ರಡಿ ಪ್ರತಿ 3 ತಿಂಗಳಿಗೊಮ್ಮೆ ನೋಟೀಸ್ ನೀಡದೇ ಅವರ ವಿರುದ್ಧ ಅವರ ವಿರುದ್ಧ ಸುಳ್ಳು ಕ್ಲೈಮ್ ಹೇಳುತ್ತಾ ಇದ್ದೇವೆ ಎಂದರೆ ಸರಿಯಲ್ಲ. ಡಿಕ್ರಿದಾರರು ಎದುರುದಾರರಿಂದ ಹಣ

ವಸೂಲು ಮಾಡಲು ಹಕ್ಕು ಉಳ್ಳವರು ಆಗಿದ್ದರೂ ಸಹ ನಾವು ಕಲಂಃ 11 ರಡಿ ಕ್ಲೈಮ್ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಜೆ ಡಿ ಆರ್ 1 ರಿಂದ 11 ರ ಪರವಕೀಲರು ತಮ್ಮ ಪರ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆಃ ಇಲ್ಲಃಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ